**<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>**

**ಓ ಎಸ್ ನಂ. 6/2016 ಪಿ.ಡಬ್ಲ್ಯೂ 1**

**<u>ದಿನಾಂಕಃ09.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ.ಕೆ.ಎಸ್.ಆರ್.ವಕೀಲರಿಂದಃ</u>**

ವಾದಿ ನನ್ನ ತಾಯಿ. ಅವರು ಆರೋಗ್ಯವಾಗಿರುತ್ತಾರೆ ಎಂದರೆ ಸರಿಯಲ್ಲ. ಅವರು ಈ ಪ್ರಕರಣದಲ್ಲಿ ಸಾಕ್ಷಿ ಹೇಳಲು ಬಂದರೆ ಸತ್ಯ ಹೊರಗಡೆ ಬರುತ್ತದೆ ಎಂಬ ಉದ್ದೇಶದಿಂದ ನಾನು ಸುಳ್ಳು ಅಧಿಕಾರ ಪತ್ರವನ್ನು ಸೃಷ್ಟಿಸಿ ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ವೈದ್ಯಕೀಯ ದಾಖಲಾತಿಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯನ್ನು ಶಿವಕುಮಾರ್ , ನೀಲಾಂಬಿಕೆ, ಶಿಲ್ಪ ಮತ್ತು ಷಡಾಕ್ಷರಿ ಎನ್ನುವವರ ಮೇಲೆ ವಾದಿ ಸಲ್ಲಿಸಿರುತ್ತಾರೆ. ನೀಲಾಂಬಿಕೆ , ಶಿಲ್ಪ ಮತ್ತು ಷಡಾಕ್ಷರಿ ಎನ್ನುವವರ ಮೇಲೆ ಈ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನಗೆ ಪರಿಚಿತರು. 1 ನೇ ಪ್ರತಿವಾದಿಯ ಕುಟುಂಬದವರು ಅರ್ಚಕರಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ದಾವಾ ಆಸ್ತಿ ಮತ್ತು ಲಿಖಿತ ಹೇಳಿಕೆಯಲ್ಲಿ ನಮೂದಿಸಿರುವ ಆಸ್ತಿ ಎರಡೂ ಒಂದೇ ಎಂದರೆ ಸರಿಯಲ್ಲ. ಲಿಖಿತ ಹೇಳಿಕೆಯಲ್ಲಿ ನಮೂದಿಸಿರುವ ಆಸ್ತಿಯ ಮೇಲೆ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಸೇರಿ ವಕೀಲರಿಗೆ ತಪ್ಪು ಮಾಹಿತಿ ನೀಡಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

2. ಲಿಖಿತ ಹೇಳಿಕೆಯಲ್ಲಿ ಹೇಳಿರುವ ಆಸ್ತಿಯ ಉತ್ತರಕ್ಕೆ 1 ನೇ ಪ್ರತಿವಾದಿಗೆ ಸೇರಿದು ಆಸ್ತಿ ಇರುತ್ತದೆ ಎಂದರೆ ಸರಿ . ಸಾಕ್ಷಿ ಮುಂದುವರಿದು ಅದರ ಮಧ್ಯ ಒಂದುಕಾಲುವೆ ಇರುತ್ತದೆ ಎನ್ನುತ್ತಾರೆ . ಲಿಖಿತ ಹೇಳಿಕೆಯಲ್ಲಿ ನಮೂದಿಸಿರುವ ಆಸ್ತಿ ಮತ್ತು 1 ನೇ ಪ್ರತಿವಾದಿಗೆ ಸೇರಿದ ಮತ್ತೊಂದು ಆಸ್ತಿ ಪರಸ್ಪರ ಉತ್ತರ – ದಕ್ಷಿಣ ವಾಗಿ ಇರುತ್ತವೆ ಎಂದರೆ ಸರಿ .

3. ನೀಲಾಂಬಿಕೆ ಮತ್ತು ಅವರ ಮಕ್ಕಳನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಅವರುಮೈಸೂರಿನಲ್ಲಿ ವಾಸವಿರುತ್ತಾರೆ , ನಮ್ಮ ಊರಿಗೆ ಬಂದು ಹೋಗಿ ಮಾಡುತ್ತಿರುತ್ತಾರೆ . ನೀಲಾಂಬಿಕೆರವರ ಗಂಡನ ಹೆಸರು ವೀರಪ್ಪ ಅವರನ್ನು ನಾನು ನೋಡಿರುತ್ತೇನೆ ,ಈಗ ಅವರು ಮೃತಪಟ್ಟಿರುತ್ತಾರೆ . ಸದರಿ ವೀರಪ್ಪರವರು ಮೈಸೂರಿನಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿದ್ದರು ಈಗ ಅವರ ಮಗ ಸಹ ಅರ್ಚಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವೀರಪ್ಪರವರು 1 ನೇ ಪ್ರತಿವಾದಿಯ ಚಿಕ್ಕಪ್ಪ ಎಂದರೆ ಸರಿ . ನೀಲಾಂಬಿಕೆ ರವರ ಮಕ್ಕಳು ದಿಃ 26-08-2008 ರಲ್ಲಿ ತಮ್ಮ ಭಾಗಕ್ಕೆ ಬಂದ ಲಿಖಿತ ಹೇಳಿಕೆಯಲ್ಲಿ ನಮೂದಿಸಿರುವ ಆಸ್ತಿಯನ್ನು ಮಾರಾಟ ಮಾಡಲು ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಅದನ್ನು ಸೃಷ್ಟಿಸಿರುತ್ತಾರೆ ಎನ್ನುತ್ತಾರೆ. ಅವರುಗಳು ಸದರಿ ಕರಾರುಪತ್ರವನ್ನು ಮಾಡಿಕೊಂಡ ವಿಚಾರ ನನಗೆ ಗೊತ್ತಿರಲಿಲ್ಲ. ಸದರಿ ಕರಾರಿನಂತೆ 1 ನೇ ಪ್ರತಿವಾದಿಯಿಂದ ರೂ.30,000/- ಹಣವನ್ನು ಪಡೆದುಕೊಂಡು ಲಿಖಿತ ತಕರಾರಿನಲ್ಲಿ ನಮೂದಿಸಿರುವ ಆಸ್ತಿಯ ಸ್ವಾಧೀನವನ್ನು ನೀಲಾಂಬಿಕೆರವರ ಮಕ್ಕಳು 1 ನೇ ಪ್ರತಿವಾದಿಗೆ ಅದೇ ದಿನಾಂಕದಂದು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ.

**ಓ ಎಸ್ ನಂ. 6/2016** **ಪಿ.ಡಬ್ಲ್ಯೂ 1**

4. ಸದರಿ ಕರಾರುಪತ್ರದ ಹಿಂದಿನಿಂದಲೂ 1ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ಲಿಖಿತ ತಕರಾರಿನಲ್ಲಿ ನಮೂದಿಸಿರುವ ಆಸ್ತಿಯ ಸ್ವಾಧೀನದಲ್ಲರುತ್ತಾರೆ ಎಂದರೆ ಸರಿಯಲ್ಲ. ಲಿಖಿತ ತಕರಾರಿನಲ್ಲಿ ನಮೂದಿಸಿರುವ ಆಸ್ತಿಯ ಪೂರ್ವಕ್ಕೆ ನಮಗೆ ಸೇರಿದ ತೋಟ ಇರುತ್ತದೆ ಎಂದರೆ ಸರಿ ಅದರ ಸ.ನಂಃ31/4 . ಕರಾರುಪತ್ರದಂತೆ ಲಿಖಿತ ತಕರಾರಿನಲ್ಲಿ ನಮೂದಿಸಿರುವ ಆಸ್ತಿಯ ಖಾತೆ ಮತ್ತು ಪಹಣಿ ನೀಲಾಂಬಿಕೆ ಮತ್ತು ಅವರ ಮಕ್ಕಳ ಹೆಸರಿಗೆ ಬಂದ ನಂತರ 1ನೇ ಪ್ರತಿವಾದಿಯ ಹೆಸರಿಗೆ ಕ್ರಯಪತ್ರವನ್ನು ಬರೆದು ಕೊಡುವುದಾಗಿ ಅವರು ಒಪ್ಪಿದ್ದರು ಎಂದರೆ ಸರಿ .

5. 1ನೇ ಪ್ರತಿವಾದಿ ನೀಲಾಂಬಿಕೆ ಮತ್ತು ಅವರ ಮಕ್ಕಳವಿರುದ್ದ ಸದರಿ ಕ್ರಯದ ಕರಾರುಪತ್ರವನ್ನು ಅನುಷ್ಠಾನ ಮಾಡಲು ಇದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ಓ.ಎಸ್. ನಂಃ 180/2014 ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರಸ್ತುತ ದಾವೆಯ ವಾದಿಯನ್ನು 4ನೇ ಪ್ರತಿವಾದಿಯಾಗಿ ಸೇರಿಸಿರುತ್ತಾರೆ ಎಂದರೆ ಸರಿ . 1ನೇ ಪ್ರತಿವಾದಿ ಓ.ಎಸ್. ನಂಃ 180/2014 ಅನ್ನು ಸಲ್ಲಿಸಿದ ನಂತರ ವಾದಿ ಈ ದಾವೆಯನ್ನು ಸಲ್ಲಿಸಿರತ್ತಾ ರೆ ಎಂದರೆ ಸರಿ .ದಿಃ 26-08-2008 ರ ಕರಾರುಪತ್ರ ಚಾಲ್ತಿಯಲ್ಲಿರುವಾಗ ವಾದಿ ಮತ್ತು ನಾನು ಸುಳ್ಳು ಕ್ರಯಪತ್ರವನ್ನು ಸೃಷ್ಟಿಸಿಕೊಂಡು ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಓ ಎಸ್ ನಂ. 6/2016** **ಪಿ.ಡಬ್ಲು: 1**

6. ವಾದಿಯ ಹೆಸರಿಗೆ ದಾವಾಸ್ವತ್ತಿಗೆ ಸಂಬಂದಿಸಿದಂತೆ ದಿಃ 20-01-2014 ರ ಕ್ರಯಪತ್ರ ಆಗಿರುತ್ತದೆ . ಸದರಿ ಕ್ರಯಪತ್ರವನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದ ಮುನ್ನ ವಾದಿ ಮತ್ತು ನೀಲಾಂಬಿಕೆಯವರ ನಡುವೆ ಒಂದು ಕರಾರುಪತ್ರ ಆಗಿರುತ್ತದೆ ಎಂದರೆ ಸರಿ . ಸದರಿ ಕರಾರುಪತ್ರದ ವಿಚಾರವನ್ನು ವಾದಪತ್ರದಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ . ಸದರಿ ಕರಾರುಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕರಾರುಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 1ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ ಕರಾರುಪತ್ರದ ಬಗ್ಗೆ ತಿಳಿದ ನಂತರ ವಾದಿಯಹೆಸರಿಗೆ ಒಂದು ಕರಾರುಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**

Dw.1 is present and is further cross examined by L/c for plaintiffs. For further defendant evidence.

Call on. 21.08.2023.

**ACJ and JMFC., Gubbi**